ವಿಷಯ : ಮಹದಾಯಿ ಯೋಜನೆ

1495 (2091)-ಶ್ರೀ ಡಿ. ಆರ್. ಪಾಟೀಲ್ (ಗದಗ್) : ಮಾನ್ಯ ಬೃಹತ್ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಮಲಪ್ರಭಾ ನದಿಗೆ ನವಿಲು ತೀರ್ಥದ ಬಳಿ ಕಟ್ಟಲಾಗಿರುವ ಮಹದಾಯಿ ನೀರು ತಿರುಗಿಸುವ ಯೋಜನೆ ಎಂದು ಕಾರ್ಯಗತವಾಗುವುದು?

ಆ) ಮಹದಾಯಿ ಯೋಜನೆಗೆ ಈಗ ಕೈಗೊಂಡಿರುವ ಸಿದ್ಧತಾ ಕ್ರಮಗಳು ಯಾವುವು ಸಮೀಕ್ಷೆ ಕಾರ್ಯ ಪೂರ್ಣಗೊಂಡಿದೆಯೇ ಯೋಜನೆಯ ಅಂದಾಜು ವೆಚ್ಚ ಎಷ್ಟು ಇದರಿಂದ ಎಷ್ಟು ಹೆಚ್ಚುವರಿ ನೀರು ದೊರೆಯುವುದು ಹಾಗೂ ಎಷ್ಟು ಪ್ರದೇಶಕ್ಕೆ ಹೆಚ್ಚುವರಿ ನೀರಾವರಿ ಸೌಲಭ್ಯ ಲಭ್ಯವಾಗುವುದು.

ಇ) ನವಿಲುತೀರ್ಥ ಆಣೆಕಟ್ಟಿಯ ಒಟ್ಟು ನೀರು ಸಂಗ್ರಹಣಾ ಸಾಮರ್ಥ್ಯ ಎಷ್ಟು, ಈ ವರೆಗೆ ಎಷ್ಟು ಸಲ ಈ ಆಣೆಕಟ್ಟು ತನ್ನ ಪೂರ್ಣ ಸಾಮರ್ಥ್ಯ ಪ್ರಮಾಣದ ನೀರು ಸಂಗ್ರಹಣೆ ಮಾಡಿದೆ ನವಿಲು ತೀರ್ಥದಲ್ಲಿ ಹೂಳು ಎಷ್ಟು ಪ್ರಮಾಣದಲ್ಲಿ ಸಂಗ್ರಹವಾಗಿದೆ ಹಾಗೂ ಅದನ್ನು ತೆಗೆಸಲು ಕ್ರಮಗಳನ್ನು ಕೈಗೊಳ್ಳಲಾಗಿದೆಯೆ? ವಿವರ ನೀಡುವುದು.

ಶ್ರೀ ಕೆ. ಎನ್. ನಾಗೇಗೌಡ (ಬೃಹತ್ ನೀರಾವರಿ ಮಂತ್ರಿಗಳು)

ಅ) ಈ ಯೋಜನೆಯನ್ನು 2 ಹಂತಗಳಲ್ಲಿ ಕೈಗೆತ್ತಿಕೊಳ್ಳಲು ಯೋಜಿಸಲಾಗಿದ್ದು, ಗೋವಾ ಸರ್ಕಾರದ ಸಹಮತಿಗಾಗಿ ವ್ಯವಹರಿಸರಲಾಗುತ್ತಿದೆ.

ಆ) ಯೋಜನೆಯ ವಿವಿಧ ಘಟಕಗಳ ಪ್ರಾಥಮಿಕ ಸಮೀಕ್ಷೆ ಕಾರ್ಯ ಮುಗಿಸಲಾಗಿದ್ದು ಅಂದಾಜು ಪತ್ರಿಕೆಯನ್ನು ತಯಾರಿಸಲಾಗಿದ್ದ, ಪರಿಶೀಲನಾ ಹಂತದಲ್ಲಿದೆ.

ಈ ಯೋಜನೆಯಿಂದ 9 ಟಿಎಂಸಿ ಹೆಚ್ಚುವರಿ ನೀರು ದೊರೆಯಲಿದ್ದು ಮಲಪ್ರಭಾ ಯೋಜನೆಯಡಿಯಲ್ಲಿ ಕಂಡು ಬರುತ್ತಿರುವ ನೀರಿನ ಕೊರತೆಯನ್ನು ನೀಗಿಸಲು ಕೈಗೆತ್ತಿಕೊಳ್ಳಲಾಗಿದೆ. ಇದೊಂದು ನೀರು ಹೊರಳಿಸುವ ಯೋಜನೆಯಾಗಿದ್ದು ಹೆಚ್ಚುವರಿ ಪ್ರದೇಶಕ್ಕೆ ನೀರಾವರಿ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಒಟ್ಟು ನೀರು ಸಂಗ್ರಹಣಾ ಸಾಮರ್ಥ್ಯ 37.73 ಟಿಎಂಸಿ ಎರಡು ಸಲ ಪೂರ್ಣ ಪ್ರಮಾಣದ ನೀರು ಸಂಗ್ರಹಣೆ ಮಾಡಿದೆ

(1991-92 ರಲ್ಲಿಮತ್ತು 1994-95ರಲ್ಲಿ) 1992ರಲ್ಲಿನ ಸಮೀಕ್ಷಾ ವರದಿಯಂತೆ ಸಂಗ್ರಹಣಾ ಸಾಮರ್ಥ್ಯದ ಶೇಕಡಾ 6.3ರಷ್ಟು ಹೂಳು ತುಂಬಿದೆ. ಹೂಳು ತೆಗೆಯಲು ಯಾವ ಕ್ರಮ ಕೈಗೊಂಡಿಲ್ಲ.

ವಿಷಯ : ಪಡಿತರ ವಿತರಣೆಯಲ್ಲಿರುವ ಅಸಮಾನತೆಯನ್ನು ಹೋಗಲಾಡಿಸುವುದು

1496 (2388)-ಶ್ರೀ ಪ್ರತಾಪ್ ಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಪಡಿತರ ವಿತರಣೆಯಲ್ಲಿ ಅಸಮಾನತೆ ಹೌದು ಇದೆಯೇ? ಇದ್ದಲ್ಲಿ ಅದನ್ನು ಸರಿಪಡಿಸಲು ಸರ್ಕಾರದವರು ತೆಗೆದುಕೊಂಡಿರುವ ಕ್ರಮವೇನು?

ಆ) ಜನಸಂಖ್ಯೆಯ ಆಧಾರದ ಮೇರೆಗೆ ಪಡಿತರ ವ್ಯವಸ್ಥೆ ಮಾಡಲಾಗಿದೆಯೇ?

ಇ) ಕಾರ್ಡುಗಳ ಸಂಖ್ಯೆಯಲ್ಲಿ ಪಡಿತರ ವ್ಯವಸ್ತೆ ಮಾಡಲಾಗಿದೆಯೇ?

ಜಿ. ಬಸವಣ್ಣೆಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)

ಅ) ಬಡತನ ರೇಖೆಗಿಂತ ಕೆಳಗಿನ ಕುಟುಂಬದವರಿಗೆ ಮತ್ತು ಬಡತನ ರೇಖೆಗಿಂತ ಮೇಲಿರುವ ಕುಟುಂಬಗಳಿಗೆ ಒದಗಿಸುವ ಆಹಾರ ಧಾನ್ಯಗಳ ಪ್ರಮಾಣದಲ್ಲಿ ವ್ಯತ್ಯಾಸವಿದೆ. ಹಾಲಿವಿತರಣ ಪ್ರಮಾಣ ಕೇಳಗಿನಂತಿದೆ.

ಬಡತನ ರೇಖೆಗಿಂತ ಕೆಳಗಿನ ಹಸಿರು ಕಾರ್ಡುದಾರರಿಗೆ	**ತಿಂಗಳೊಂದಕ್ಕೆ ಪ್ರತಿ ಪಡಿತರ ಚೀಟಿಗೆ 8 ಕೆ.ಜಿ. ಅಕ್ಕಿ 2 ಕೆ. ಜಿ. ಗೋಧಿಯಂತೆ.**
ಕೇಸರಿ : ಫೋಟೋ	ಪ್ರತಿ ಪಡಿತರ ಚೀಟಿಗೆ ಮಾಹೆ
ಪಡಿತರ ಚೀಟಿ	ಯಾನ 2 1/2 ಕೆ.ಜಿ. ಯಂತೆ
ಹೊಂದಿರುವ ಇತರೆ	ಆಹಾರ ಧಾನ್ಯ.
ಕುಟುಂಬಗಳಿಗೆ	(ಅಕ್ಕಿ ಅಥವಾ ಗೋಧಿ)